**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ ಹಾಗೂ**
**ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆಸು.ಇ. (ಚುನಾವಣೆಗಳು)**
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ: ಸಿಆಸುಇ 06 ಮಾಸ/ಪ.ಗೋ/ 2018 ದಿನಾಂಕ: 25-04-2018

**ಪತ್ರಿಕಾ ಪ್ರಕಟಣೆ**

## ಮಾರ್ಕ್ -3 ಇವಿಎಂಗಳ ಪ್ರಾಥಮಿಕ ಹಂತದ ಪರಿಶೀಲನೆ ಯಶಸ್ವಿ

ಬೆಂಗಳೂರು, ಏಪ್ರಿಲ್ 25 : ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಮಾರ್ಕ್ -3 ತಂತ್ರಜ್ಞಾನದ ಇವಿಎಂ ಯಂತ್ರಗಳನ್ನು (ಬಿಬಿಎಂಪಿ ವ್ಯಾಪ್ತಿ) ಬೆಂಗಳೂರಿನ ಆಯ್ದ ವಿಧಾನಸಭಾ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. ಈ ಸಂಬಂಧ 7 ವಿಧಾನಸಭಾ ಕ್ಷೇತ್ರಗಳಲ್ಲಿ ಮಾರ್ಕ್ 3 ಇವಿಎಂ ಮತಯಂತ್ರಗಳ ಪ್ರಥಮ ಹಂತ ಪರಿಶೀಲನೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಹಾಗೆಯೇ, ಇಂದು ರಾಜಕೀಯ ಪಕ್ಷಗಳಿಗೆ ಅಣಕು ಮತದಾನಕ್ಕೆ ವ್ಯವಸ್ಥೆ ಮಾಡಲಾಗಿತ್ತು ಎಂದು ಪ್ರಥಮ ಹಂತ ಪರಿಶೀಲನೆ ವೇಳೆ ಹಾಜರಿದ್ದ ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್ ಅವರು ತಿಳಿಸಿದ್ದಾರೆ.

ಮಾರ್ಕ್ 3 ಇವಿಎಂ ಮತಯಂತ್ರಗಳು ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ್ದು, ಇವುಗಳ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ಗಳನ್ನು ಬಿಇಎಲ್ ಸಂಸ್ಥೆ ಸಿದ್ಧಪಡಿಸಿ ನೀಡುವ ತಂತ್ರಾಂಶವನ್ನು ಮಾತ್ರ ಸ್ವೀಕರಿಸುತ್ತಿದೆ. ಇನ್ನುಳಿದಂತೆ ಯಾವುದೇ ತಂತ್ರಾಂಶವನ್ನು ಇದಕ್ಕೆ ಅಳವಡಿಸಲು ಸಾಧ್ಯವಾಗುವುದಿಲ್ಲ.

ಎಂ-3 ಕಂಟ್ರೋಲ್ ಯೂನಿಟ್‌ಗಳಲ್ಲಿ 24 ಬ್ಯಾಲೆಟ್ ಯೂನಿಟ್‌ಗಳನ್ನು ಜೋಡಣೆ ಮಾಡಬಹುದಾಗಿದೆ. ಒಟ್ಟಾರೆಯಾಗಿ 384 ಅಭ್ಯರ್ಥಿಗಳ ಹೆಸರುಗಳನ್ನು ಸೇರಿಸಬಹುದಾಗಿದೆ. ಎಂ-2 ಯಂತ್ರದಲ್ಲಿ 64 ಅಭ್ಯರ್ಥಿಗಳ ಹೆಸರುಗಳನ್ನು ಸೇರಿಸಲು ಅವಕಾಶವಿತ್ತು. 4 ಬ್ಯಾಲೆಟ್ ಯೂನಿಟ್‌ಗಳನ್ನು ಜೋಡಣೆ ಮಾಡಬಹುದಾಗಿತ್ತು.

ಬೆಂಗಳೂರಿನಲ್ಲಿ 7 ವಿಧಾನಸಭಾ ಕ್ಷೇತ್ರಗಳಲ್ಲಿ ಮಾರ್ಕ್ 3 ಇವಿಎಂ ಮತಯಂತ್ರಗಳನ್ನು ಬಳಕೆ ಮಾಡಲಾಗುತ್ತಿದೆ. ಇದಕ್ಕಾಗಿ 2700 ಬ್ಯಾಲೆಟ್ ಯೂನಿಟ್, 2250 ಕಂಟ್ರೋಲ್ ಯೂನಿಟ್, 2350 ವಿವಿಪ್ಯಾಟ್‌ಗಳನ್ನು ಆಯೋಗವು ತರಿಸಿಕೊಂಡಿದೆ.

**ಎಂ-2 ಇವಿಎಂ** : ಇನ್ನುಳಿದಂತೆ ರಾಜ್ಯದ 217 ವಿಧಾನಸಭಾ ಕ್ಷೇತ್ರಗಳಲ್ಲಿ ಎಂ-2 ಮತಯಂತ್ರಗಳ ಬಳಕೆಯಾಗುತ್ತಿದ್ದು, ಇದಕ್ಕಾಗಿ 92141 ಬ್ಯಾಲೆಟ್ ಯೂನಿಟ್, 82580 ಕಂಟ್ರೋಲ್ ಯೂನಿಟ್ ಹಾಗೂ 84145 ವಿವಿಪ್ಯಾಟ್‌ಗಳನ್ನು ಬಳಸಲಾಗುತ್ತಿದೆ.

**ತರಬೇತಿ**: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಳಕೆಯಾಗುವ ವಿವಿಪ್ಯಾಟ್ ಹಾಗೂ ಇವಿಎಂಗಳ ಬಗ್ಗೆ ರಾಜ್ಯಾದ್ಯಂತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಾಧ್ಯಮದವರು, ರಾಜಕೀಯ ಪಕ್ಷದವರು, ನ್ಯಾಯಾಂಗ ಅಧಿಕಾರಿಗಳು, ವಲಯಾಧಿಕಾರಿಗಳು, ಮಾಸ್ಟರ್ ಟ್ರೈನರ್ಸ್ ಹಾಗೂ ಮತದಾರರು ಸೇರಿ ಸುಮಾರು ಒಂದು ಲಕ್ಷ ಮಂದಿಗೆ ಇದುವರೆಗೆ ತರಬೇತಿ ನೀಡಲಾಗಿದೆ.

****